ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 11.06.2026
ಪಾಟೀಸವಾಲು ವಾದಿ ಪರ ಶ್ರೀ ಬಿ ಬಸವರಾಜ ವಕೀಲರಿಂದಃ

ನನ್ನ ಅಜ್ಜನ ಹೆಸರು ಮದ್ಯಾನಪ್ಪ ಪಟ್ಟಣಶೆಟ್ಟಿ ಇರುತ್ತದೆ. ನಮ್ಮ ಕುಟುಂಬಕ್ಕೆ ಹುಲಬನ್ನಿ ಎಂಬ ಅಡ್ಡ ಹೆಸರು ಕೂಡಾ ಇರುತ್ತದೆ. ನಮ್ಮ ಅಜ್ಜನಿಗೆ ನಾಲ್ಕು ಜನ ಮಕ್ಕಳು ಇರುತ್ತಾರೆ. ಅವರೆಂದರೆ ಕರಿಬಸಪ್ಪ , ಶಿದ್ದಲಿಂಗಪ್ಪ , ಗುರುಸಿದ್ದಪ್ಪ , ಶರಣಪ್ಪ ಇರುತ್ತಾರೆ. ಅವರ ಪೈಕಿ ಕರಿಬಸಪ್ಪ ನನ್ನ ತಂದೆ ಇರುತ್ತಾರೆ. ನನ್ನ ತಂದೆ ಕರಿಬಸಪ್ಪನಿಗೆ ಮೂರು ಜನ ಮಕ್ಕಳು ಇರುತ್ತೆವೆ. ಅವರೆಂದರೆ ನಾನು , ಮಹಾಬಲೇಶ , ಮಹೇಶ ಇರುತ್ತೇವೆ. ನನ್ನ ತಂದೆ ಮತ್ತು ಅವರ ಸಹೋದರರ ಪೈಕಿ ಈಗ ಯಾರು ಜೀವಂತ ಇರುವುದಿಲ್ಲ. ಗುರುಸಿದ್ದಪ್ಪನ ಮಕ್ಕಳು ವಾದಿಗಳು ಎಂದರೆ ಸರಿ. ನನ್ನ ತಂದೆ 10 ನೇ ತರಗತಿಯವರೆಗೆ ವಿದ್ಯಾಬ್ಯಾಸ ಮಾಡಿರುತ್ತಾರೆ. ಅವರಿಗೆ ಓದಲು ಬರೆಯಲು ಬರುತ್ತಿತ್ತು.

ನನ್ನ ತಂದೆ ಸಹೋದರರ ಪೈಕಿ ಶಿದ್ದಲಿಂಗಪ್ಪರವರು ತಹಶೀಲ್ದಾರಾಗಿ ನಿವೃತ್ತಿ ಹೊಂದಿರುತ್ತಾರೆ. ಅವರು ಕುಷ್ಟಗಿಯಲ್ಲಿ ವಾಸ ಇರುತ್ತಿರಲಿಲ್ಲ. ಅವರು ನಿವೃತ್ತಿಯಾದ ನಂತರ ರಾಯಚೂರನಲ್ಲಿ ವಾಸ ಇದ್ದರು. ಅವರು ಅಲ್ಲಿಯೇ ಮರಣಹೊಂದಿರ ಬಹುದು ನನಗೆ ಗೊತ್ತಿಲ್ಲ.

ವಾದಿಗಳ ತಂದೆ ಗುರುಸಿದ್ದಪ್ಪರವರು ಬೆನಕನಾಳ ಗ್ರಾಮದಲ್ಲಿ ವಾಸ ಇದ್ದರು. ಗುರುಸಿದ್ದಪ್ಪರವರ ಹೆಸರಿನಲ್ಲಿ ಗಜೇಂದ್ರಗಡದಲ್ಲಿ ಒಂದು ಮಳಿಗೆ ಮತ್ತು ಒಂದು ಗೋಡಾನ ಇತ್ತು ಎಂದರೆ ಸರಿ. ಸದರಿ ಮಳಿಗೆ ನಂ. 3236 ಅದರ ಕ್ರಮ ಸಂ. 278 ಮತ್ತು ಗೋಡಾನ ನಂ. 3251 ಕ್ರ.ಸಂ 292 ಇರುತ್ತದೆ ಎಂದರೆ ಸರಿ. ಗುರುಸಿದ್ದಪ್ಪರವರು ಸದರಿ ಮಳಿಗೆಯಲ್ಲಿ ವ್ಯಾಪಾರ ಮಾಡಿಕೊಂಡು ಇದ್ದರು

ಎಂದರೆ ಸರಿಯಲ್ಲ. ನನ್ನ ತಂದೆಯ ಸಹೋದರರ ಪೈಕಿ ನನ್ನ ತಂದೆ ಮತ್ತು ಶರಣಪ್ಪರವರು ಕುಷ್ಟಗಿಯಲ್ಲಿದ್ದು ಗುರುಸಿದ್ದಪ್ಪ ಮತ್ತು ಶಿದ್ದಲಿಂಗಪ್ಪ ಬೇರೆ ಕಡೆಗೆ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಶರಣಪ್ಪ ಮಾತ್ರ ಕುಷ್ಟಗಿಯಲ್ಲಿದ್ದರು ಎಂದು ನುಡಿಯುತ್ತಾರೆ.

ಆ ಕಾಲಕ್ಕೆ ಮದ್ಯಾನಪ್ಪರವರ ಒಟ್ಟು ಕುಟುಂಬಕ್ಕೆ 50 ರಿಂದ 60 ಎಕರೆ ಜಮೀನು ಇತ್ತು. ಅವುಗಳ ಸರ್ವೆನಂಬರ ಮತ್ತು ವಿಸ್ತೀರ್ಣ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ 2-3 ಮನೆಗಳು ಇದ್ದವು ಮತ್ತು ನೀವೇಶನಗಳು ಇರಲಿಲ್ಲ. ನಮ್ಮ ಒಟ್ಟು ಕುಟುಂಬಕ್ಕೆ 6 ಮನೆಗಳು , 2 ಪ್ಲಾಟಗಳು ಇದ್ದವು ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ. ಮನೆ ಮತ್ತು ಪ್ಲಾಟಗಳು ಕುಷ್ಟಗಿಯಲ್ಲಿದ್ದವು ಎಂದರೆ ಸರಿ.

ಮನೆ ಸಂ. 1672 ಕ್ರ . ಸಂ. 892, ಮನೆ ಸಂ. 1674 ಕ್ರ . ಸಂ. 893, ಮನೆ ಸಂ. 1675 ಕ್ರ . ಸಂ. 894, ಮನೆ ಸಂ. 1676 ಕ್ರ . ಸಂ. 895,ಮನೆ ಸಂ. 1633 ಕ್ರ . ಸಂ. 855, ಮನೆ ಸಂ. 1464 ಕ್ರ . ಸಂ. 743 ಮತ್ತು ನಿವೇಶನ ಸಂ. 1403 ಕ್ರ.ಸಂ. 700, ನಿವೇಶನ ಸಂ. 1404 ಕ್ರ.ಸಂ. 701 ಇದ್ದವು ಎಂದರೆ ಸಾಕ್ಷಿಯು ಈ ಕುರಿತು ನನ್ನತಂದೆಗೆ ಗೊತ್ತಿದ್ದು ನನಗೆ ಗೊತ್ತಿಲ್ಲಎಂದು ನುಡಿಯುತ್ತಾರೆ.

ಅದೇ ರೀತಿ ನಮ್ಮ ಕುಟುಂಬಕ್ಕೆ 13 ಜಮೀನುಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ನಮ್ಮ ಅಜ್ಜನ ಕಾಲದಿಂದ ಸುಮಾರು 70 ಎಕರೆ ಜಮೀನು ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 50-60 ಎಕರೆ ಜಮೀನು ಇತ್ತು ಎಂದು ನುಡಿದಿರುತ್ತಾರೆ. ಇದ್ದಂತಹ ಜಮೀನುಗಳು ಕುಷ್ಟಗಿ ಸೀಮಾದಲ್ಲಿದ್ದವು ಎಂದರೆ ಸರಿ. ಸದರಿ ಜಮೀನುಗಳು ಮತ್ತು ಮನೆಗಳು ನಮ್ಮ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳಾಗಿದ್ದು ನನ್ನ ತಂದೆಯ ಸಹೋದರರು ಯಾರು

ಖರೀದಿ ಹಿಡಿದ ಆಸ್ತಿ ಅಲ್ಲ ಎಂದರೆ ಸರಿ . ಗಜೇಂದ್ರಗಡದಲ್ಲಿನ ಮಳಿಗೆ ಮತ್ತು ಗೋಡಾನ ಆಸ್ತಿ ಹೊರತುಪಡಿಸಿ ದಾವಾ ಸ್ವತ್ತನ್ನು ಸೇರಿಸಿಕೊಂಡು ಎಲ್ಲಾ ಜಮೀನುಗಳು ಮತ್ತು ಮನೆಗಳು ನನ್ನ ಅಜ್ಜನ ಹೆಸರಿನಲ್ಲಿದ್ದವು ಎಂದರೆ ಸಾಕ್ಷಿಯು ಎಲ್ಲಾ ಆಸ್ತಿಗಳು ನಮ್ಮ ಅಜ್ಜನ ಹೆಸರಿನಲ್ಲಿದ್ದವು ಎಂದು ನುಡಿಯುತ್ತಾರೆ. ನನ್ನ ಅಜ್ಜ ಯಾವ ವರ್ಷದಲ್ಲಿ ಮರಣಹೊಂದಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ.

ನನ್ನ ಅಜ್ಜ ಮದ್ದಾನಪ್ಪನಿಗೆ ನಮ್ಮ ತಂದೆ ಕರಿಬಸಪ್ಪನೆ ಹಿರಿಯ ಮಗ ಇರುತ್ತಾರೆ. ಆ ಕಾರಣದಿಂದ ನನ್ನ ಅಜ್ಜನ ಮರಣಾ ನಂತರ ಎಲ್ಲಾ ಆಸ್ತಿಗಳ ಖಾತೆಯು ನನ್ನ ತಂದೆಯ ಹೆಸರಿಗೆ ವರ್ಗಾವಣೆ ಆಯಿತು ಎಂದರೆ ಸರಿ. ನನ್ನ ತಂದೆಯ ಸಹೋದರರು ಅವರ ಒಟ್ಟು ಕುಟುಂಬದ ಆಸ್ತಿಯನ್ನು ಭಾಗ ಮಾಡಿಕೊಂಡಿರುತಾರೆ. ಸದರಿ ವಿಭಾಗವು 1987 ರಲ್ಲಿ ಆಗಿರುತ್ತದೆ. ದಿನಾಂಕ ಗೊತ್ತಿಲ್ಲ. ವಿಭಾಗವಾದ ಕುರಿತು ಪತ್ರ ಬರವಣಿಗೆ ಆಗಿರುತ್ತದೆ. ಸದರಿ ಪತ್ರವನ್ನು ವಿಭಾಗ ಪತ್ರ ಎಂದು ಬರೆದಿರುತ್ತಾರೆ. ಸದರಿ ವಿಭಾಗ ಪತ್ರವನ್ನು ನಾನು ನೋಡಿರುವುದಿಲ್ಲ. ವಿಭಾಗ ಪತ್ರಕ್ಕೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಿಭಾಗ ಪತ್ರದ ಪ್ರಕಾರ ಯಾರಿಗೆ ಯಾವ ಆಸ್ತಿ ಬಂದವು ಎಂದು ನನಗೆ ಗೊತ್ತಿಲ್ಲ. ಸದರಿ ಪತ್ರಕ್ಕೆ ಯಾರು ಸಹಿ ಮಾಡಿದ್ದಾರೆ ಎಂದು ನನ್ನ ತಂದೆ ಹೇಳಿರುವುದಿಲ್ಲ. ವಿಭಾಗ ಪತ್ರವಾದಾಗ ನನಗೆ 18 ವರ್ಷ ವಯಸ್ಸು ಇತ್ತು.

ಕರಿಬಸಪ್ಪನ ಮಕ್ಕಳ ಪೈಕಿ ನಾನು ಹಿರಿಯವನು ಇರುತ್ತೇನೆ. ವಿಭಾಗ ಪತ್ರದಲ್ಲಿ ಯಾವ ಯಾವ ಆಸ್ತಿಗಳು ಬಂದಿವೆ ಎಂದು ನನ್ನ ತಂದೆ ಹೇಳಿರುವುದಿಲ್ಲ. ನನ್ನ ಚಿಕ್ಕಪ್ಪಂದಿರಗೆ ಯಾವ ಆಸ್ತಿಗಳು ಬಂದವು ಎಂದು ಹೇಳಿರುವುದಿಲ್ಲ. 50-60 ಎಕರೆ ಪೈಕಿ ಯಾರಿಗೆ ಎಷ್ಟು ಎಕರೆ ಜಮೀನು ಹೋಗಿದೆ ಎಂದು ನನ್ನ ತಂದೆ

ಹೇಳಿರುವುದಿಲ್ಲ. ವಿಭಾಗ ಪತ್ರದ ಪ್ರಕಾರ ಅವರವರ ಹೆಸರಿಗೆ ಖಾತೆ ಆಗಿರುತ್ತದೆ. ನನ್ನ ತಂದೆಯ ಭಾಗಕ್ಕೆ ಬಂದ ಆಸ್ತಿಗಳ ಖಾತೆ ಆಗಿರುತ್ತದೆ. ಅವುಗಳ ಸರ್ವೆ ನಂಬರ ನನಗೆ ಗೊತ್ತಿಲ್ಲ. ನನ್ನ ತಂದೆ ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು.

ಸಾಕ್ಷಿಗೆ ಅವರ ತಂದೆಯ ಸಹಿ ಇರುವ ನಿಪಿ-2 ದಾಖಲಾತಿಯನ್ನು ತೋರಿಸಿದ್ದು ಅದರಲ್ಲಿರುವ ಅವರ ತಂದೆಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಪಾಲು ವಿಭಾಗ ಪತ್ರಕ್ಕೆ ವಾದಿಗಳ ತಂದೆ ತನಗೆ ಒಪ್ಪಿಗೆ ಇಲ್ಲ ಎಂದು ಸಹಿ ಮಾಡಲಿಲ್ಲಎಂದರೆ ನನಗೆ ಗೊತ್ತಿಲ್ಲ. ನನ್ನಅಜ್ಜ ಮರಣಹೊಂದಿದ ನಂತರ ಮನೆಯ ಹಿರಿತನವನ್ನು ನನ್ನ ತಂದೆ ಮಾಡುತ್ತಿದ್ದರು. ಸದರಿ ವಿಭಾಗದಲ್ಲಿ ನಗದು ಮತ್ತು ಬಂಗಾರ, ಬೆಳ್ಳಿವನ್ನು ವಿಭಾಗ ಮಾಡಬೇಕು ಎಂದು ವಾದಿಗಳ ತಂದೆ ಹಿರಿಯರ ಸಮಕ್ಷಮ ಹೇಳಿದ್ದರಿಂದ ಅದಕ್ಕೆ ನನ್ನ ತಂದೆ ಒಪ್ಪದೆ ಇದುದ್ದರಿಂದ ವಾದಿಗಳ ತಂದೆ ವಿಭಾಗ ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಆಸ್ತಿಗಳಲ್ಲಿ ಭಾಗ ಕೊಡುವಂತೆ ಕೋರಿ ನನ್ನ ತಂದೆ 1991 ರಲ್ಲಿ ಕೊಪ್ಪಳ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರ ಸಹಿ ಪಡೆದು ಗುರುಸಿದ್ದಪ್ಪ ಮತ್ತು ಶರಣಪ್ಪ ಸೇರಿ ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಪ್ರಕರಣ ಓ ಎಸ ನಂ. 40/1991 ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ನನ್ನ ತಂದೆಯವರು ಗುರುಸಿದ್ದಪ್ಪ , ಶರಣಪ್ಪ , ಬಸಮ್ಮ , ಶಿದ್ದಲಿಂಗಪ್ಪ ರವರ ವಿರುದ್ಧ ಹಾಕಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯು ದಿನಾಂಕ 02.12.1997 ರಂದು ಮುಕ್ತಾಯ ಆಗಿರುತ್ತದೆ ಎಂದರೆ ಸಾಕ್ಷಿಯು ಪ್ರಕರಣದ ಬಗ್ಗೆ ಗೊತ್ತಾದ ನಂತರ ನಮ್ಮ ತಮ್ಮ ಹೋಗಿ ಪ್ರಕರಣ ಹಿಂಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಪ್ರಕರಣದಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿಗಳ ಬಗ್ಗೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು , ಅನುಮತಿಸಿ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ